ವಿಶ್ವವಾಣಿ

ಸಂಪಾದಕೀಯ

ದೂರದೃಷ್ಟಿಯೇ ಇಲ್ಲವಾದರೆ...

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಶಿವಮೊಗ್ಗದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಾ, 'ನಮಗೆ ದೇಶದ ವಿಷನ್ ಚಿಂತೆಯಾದರೆ, ಪ್ರತಿಪಕ್ಷಗಳಿಗೆ ಕಮಿಷನ್ ಚಿಂತೆಯಾಗಿದೆ' ಎಂದಿರುವುದನ್ನು ನೀವು ಈಗಾಗಲೇ ಪತ್ರಿಕೆಗಳಲ್ಲಿ ಓದಿದ್ದೀರಿ. ಚುನಾವಣೆಯ ಆಸುಪಾಸಿನಲ್ಲಿ ಹೊಮ್ಮುವ ಇಂಥ ಪದಪಂಜಗಳು ಮಿಕ್ಕ ಅವಧಿಯಲ್ಲೂ ಚರ್ಚೆಗೆ ಬಂದು, ಜನಕಲ್ಯಾಣಕ್ಕೆ ಆಳುಗರು ಸಂಕಲ್ಪಿಸುವಂತಾದರೆ, ಅಭಿವೃದ್ಧಿಯ ಹಾದಿಯೇನೂ ದೂರ ಉಳಿಯುವುದಿಲ್ಲ. ಆದರೆ ಹಾಗಾಗುತ್ತಿಲ್ಲ ಎಂಬುದೇ ಸ್ವಾತಂತ್ರ್ಯೋತ್ತರ ಭಾರತ ಸಮಸ್ಯೆಗಳಲ್ಲಿ ಒಂದಾಗಿದೆ. ತಾವು ಅಧಿಕಾರಕ್ಕೆ ಬಂದರೆ ಏನೇನೆಲ್ಲಾ ನೆರವೇರಿಸಬೇಕು ಎಂಬ ಜನನಾಯಕರ ಆಶಯಗಳ ಸಂಕಲಿತ ರೂಪವೇ ಆಗಿರುತ್ತದೆ ಇಂಥದೊಂದು 'ದೂರದೃಷ್ಟಿ'. ಆದರೆ ಅಧಿಕಾರ ದಕ್ಕುತ್ತಿದ್ದಂತೆ ಜನನಾಯಕರಲ್ಲಿ ರೂಪುಗೊಳ್ಳುವ ಸ್ವಹಿತಾಸಕ್ತಿಯ ನೆರವೇರಿಕೆಗಾಗಿನ ಹಪಹಪಿ ಮತ್ತು ಸ್ವಜನಪಕ್ಷಪಾತದ ಕಾರಣದಿಂದಾಗಿ ಆ ದೂರದೃಷ್ಟಿ ಕಾಲಕ್ರಮೇಣ ಮಸುಕಾಗಿಬಿಡುವುದೇ ಹಿನ್ನಡೆಗೆ ಕಾರಣ. ಇಲ್ಲವಾಗಿದ್ದಲ್ಲಿ, ದೇಶದ ಸಾಕಷ್ಟು ಹಳ್ಳಿಗಳು ಈಗಲೂ ಸರಿಯಾದ ರಸ್ತೆ, ಶಾಲೆ, ಆಸ್ಪತ್ರೆ, ವಿದ್ಯುಚ್ಛಕ್ತಿ, ಕುಡಿಯುವ ನೀರಿನಂಥ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗುತ್ತಿರಲಿಲ್ಲ. ಕೃಷಿ ಕಾರ್ಯಕ್ಕಾಗಿ ಅನಿಶ್ಚಿತ ಮಳೆಯನ್ನೇ ನೆಚ್ಚಬೇಕಾಗಿ ಬಂದಿರುವುದು ನಮ್ಮ ದೇಶದಲ್ಲಿ ದಶಕಗಳಿಂದಲೂ ಕಾಣಬರುತ್ತಿರುವ ಅನಿವಾರ್ಯತೆ; ಪರ್ಯಾಯ ನೀರಾವರಿ ವ್ಯವಸ್ಥೆಯನ್ನು ಬಹಳಷ್ಟು ಕಡೆ ಇನ್ನೂ ಕಲ್ಪಿಸಲಾಗದಿರುವುದು, ಕೃಷಿಯೇ ಬಹುತೇಕರ ಪ್ರಮುಖ ಜೀವನೋಪಾಯವಾಗಿರುವ ಭಾರತದಲ್ಲಿನ ಒಂದು ನ್ಯೂನತೆಯಲ್ಲವೇ? ಇದಕ್ಕೆ ಕಾರಣ, ಜನನಾಯಕರಲ್ಲಿ ದೂರದೃಷ್ಟಿ ಇಲ್ಲದಿರುವುದೋ ಅಥವಾ ಇದ್ದರೂ ಅದರ ಸಾಕಾರಕ್ಕೆ ಮನಸ್ಸು ಮಾಡದಿರುವುದೋ ಎಂಬುದನ್ನು ಅವರೇ ಹೇಳಬೇಕು. ನಮ್ಮ ರೈತರು ವೈಭೋಗದ ಜೀವನವನ್ನೇನೂ ಕೇಳುತ್ತಿಲ್ಲ; ಗುಣಮಟ್ಟದ ಬಿತ್ತನೆ ಬೀಜ ಮತ್ತು ರಸಗೊಬ್ಬರದ ಲಭ್ಯತೆಯು ಅಬಾಧಿತವಾಗಿರಬೇಕು, ತಾವು ಬೆಳೆದ ಬೆಳೆಗೆ ಸೂಕ್ತ ಬೆಂಬಲಬೆಲೆ ಸಿಗಬೇಕು ಎಂಬುದಷ್ಟೇ ಅವರ ಆಗ್ರಹವಾಗಿರುತ್ತದೆ. ಆದರೆ ಇದು ನೆರವೇರದ ಕಾರಣ, ತಾವು ಮಾಡಿದ ಸಾಲವನ್ನು ತೀರಿಸಲಾಗದೆ ರೈತರು ಆತ್ಮಹತ್ಯೆಯ ಮೊರೆಹೋಗುವಂತಾಗಿದೆ. ದೂರದೃಷ್ಟಿಯ ಮಹತ್ವವನ್ನು ನಮ್ಮ ಜನನಾಯಕರು ಇನ್ನಾದರೂ ಅರಿಯಲಿ.

ಸೊಂಪಾದಕೀಯ

ಆಪರೇಷನ್ ಅಬಾರ್ಷನ್

ಇದು ಒಬ್ಬ ಆಡ್ಡಕಸುಬಿ ಡಾಕ್ಟರ್‌ನ ಕರ್ಮಕಾಂಡ. ಭ್ರೂಣಹತ್ಯೆ ಮಹಾಪಾಪ ಅನ್ನೋ ಮಾತುಗಳ ನಡುವೆ ಒಬ್ಬ ಮಹಾವೈದ್ಯ ಕಳೆದ ಮೂರು ವರ್ಷಗಳಲ್ಲಿ ಬರೋಬ್ಬರಿ 900 ಅಬಾರ್ಷನ್ ಮಾಡಿದ್ದಾನೆ. ಈಗ ಪೊಲೀಸರ ಅತಿಥಿ ಆಗಿದ್ದಾನೆ. ಆದರೆ 'ವೈದ್ಯೋ ನಾರಾಯಣೋ ಹರಿಃ' ಅನ್ನೋ ಕಾಲದಲ್ಲಿ, ಅದರಲ್ಲೂ ಭ್ರೂಣ ಪತ್ತೆ ಕಾನೂನಿಗೆ ವಿರುದ್ಧ ಅನ್ನೋ ಕಾಲದಲ್ಲಿ ಈತ ಭ್ರೂಣ ಪತ್ತೆ ಮಾಡಿದ್ದಲ್ಲದೆ, ಅದನ್ನು ಪತ್ತೆ ಇಲ್ಲದಂತೆ ಕೂಡಾ ಮಾಡಿ ಈಗ ಅನುಭವಿಸುತ್ತಿದ್ದಾನೆ. ಆದರೂ 3 ವರ್ಷಗಳಲ್ಲಿ 900 ಅಂದ್ರೆ ಪ್ರತಿವರ್ಷಕ್ಕೆ 300 ಅಬಾರ್ಷನ್. ಆದರಲ್ಲೂ ಈತ ಕರ್ನಾಟಕದಲ್ಲಿ ಇರೋ ಡಾಕ್ಟರ್. ಹಾಗಾಗಿ ಸರಿಸುಮಾರು ನಮ್ಮ ರಾಜ್ಯದಲ್ಲೇ ಇಷ್ಟಾದರೆ ಇನ್ನು ದೇಶ, ಪ್ರಪಂಚದಲ್ಲಿ ಪ್ರತಿನಿತ್ಯ ಅದೆಷ್ಟು ಅಬಾರ್ಷನ್ ಕೆಲಸ ನಡೆಯುತ್ತಿದೆಯೋ ದೇವರೇ ಬಲ್ಲ. ಅಲ್ಲದೆ ಈ ಡಾಕ್ಟರ್ ಪ್ರತಿ ಅಬಾರ್ಷನ್‌ಗೆ 30 ಸಾವಿರ ರುಪಾಯಿ ಚಾರ್ಜ್ ಮಾಡುತ್ತಿದ್ದನಂತೆ. ಅಲ್ಲಿಗೆ ಈತ ವರ್ಷಕ್ಕೆ ಎಷ್ಟು ಕಮಾಯಿ ಮಾಡುತ್ತಿದ್ದ ಲೆಕ್ಕ ಹಾಕಿ. ಈ ರೀತಿ ಭ್ರೂಣಹತ್ಯೆ ಮಾಡಿ, ಡಾಕ್ಟರ್ ಅಂದ್ರೆ ಜೀವ ಉಳಿಸಿಯೇ ದುಡ್ಡು ಮಾಡಬೇಕಿಲ್ಲ, ಜೀವ ತೆಗೆದು ಕೂಡಾ ದುಡ್ಡು ಮಾಡಬಹುದು ಅನ್ನೋದಕ್ಕೆ ಕೆಟ್ಟ ಉದಾಹರಣೆ ಆಗಿದ್ದಾನೆ. ಈ ಮಹಾನುಭಾವ ನಗರದ ಹೊರವಲಯದಲ್ಲಿ ಇರೋ ಕಬ್ಬಿನಿಂದ ಬೆಲ್ಲ ತೆಗೆಯೋ ಜಾಗವೊಂದರಲ್ಲಿ ಯಾರಿಗೂ ಗೊತ್ತಿಲ್ಲದಂತೆ ಈ ಕೆಲಸ ಮಾಡುತ್ತಿದ್ದನಂತೆ. ಕಬ್ಬಿನಿಂದ ಬೆಲ್ಲ ತೆಗೆಯೋ ಜಾಗದಲ್ಲಿ ತಾಯಿಯ ಗರ್ಭಕೋಶದಿಂದ ಮಗು ತೆಗೆಯೋ ಭಂಡ ಕೆಲಸ ಮಾಡಿದ ಈತ ಮತ್ತು ಈತನ ಸಹಚರರು ಈಗ ಪೊಲೀಸರ ಅತಿಥಿ ಆಗಿದ್ದಾರೆ. ಹೆಣ್ಣು ಗರ್ಭಿಣಿ ಆದ್ರೆ ಅದನ್ನ ಸಿಹಿ ಸುದ್ದಿ ಅಂತಾರೆ. ಅಂಥಾದ್ರಲ್ಲಿ ಸಿಹಿಯಾದ ಬೆಲ್ಲ ತಯಾರಾಗೋ ಜಾಗದಲ್ಲಿ ಸ್ವೀಟ್ ನ್ಯೂಸ್ ಅನ್ನು ಹಾಳು ಮಾಡೋ ಮನೆಹಾಳು ಕೆಲಸ ಮಾಡುತ್ತಿದ್ದ ಈ ಡಾಕ್ಟರ್ ಅನ್ನೋ ಹಂತಕ ಈಗ ಕ್ರಿಮಿನಲ್ ಎನಿಸಿಕೊಳ್ಳುವ ಹಂತಕ್ಕೆ ಬಂದಿದ್ದಾನೆ. ಆಲೆಮನೆಯಲ್ಲಿ ಅನಧಿಕೃತ ಕೊಲೆಗಳನ್ನು ಮಾಡಿದ ಈತ ಈಗ ಪೊಲೀಸು, ಕೋರ್ಟು ಅಂತ ಅಲೆಯೋ ಪರಿಸ್ಥಿತಿ ಬಂದಿದೆ. ಪೊಲೀಸರು ಮಾಡಿದ ಈ 'ಆಪರೇಷನ್ ಅಬಾರ್ಷನ್'ನಿಂದಾಗಿ ಈತನ ಇಲ್ಲೀಗಲ್ ಆಪರೇಷನ್‌ಗಳಿಗೆ ಕಡಿವಾಣ ಬಿದ್ದಿದೆ.

ಸಂಪಾದಕರ ಸದ್ಯಶೋಧನೆ

ಡಾ.ಸಿಂಗ್ ವಿತ್ತ ಸಚಿವರಾಗಿದ್ದು ಹೇಗೆ?

'ಡಾ.ಮನಮೋಹನ ಸಿಂಗ್ ಅವರನ್ನು ಹಣಕಾಸು ಸಚಿವರನ್ನಾಗಿ ಮಾಡಿದರೆ ಹೇಗೆ ಎಂಬ ಯೋಚನೆ ಮೊದಲ ಬಾರಿಗೆ ಬಂದಿದ್ದು ಯಾರಿಗೆ?' ಪ್ರಾಯಶಃ ಈ ಪ್ರಶ್ನೆಗೆ ಎಲ್ಲರೂ ಪಿ.ವಿ. ನರಸಿಂಹ ರಾವ್ ಎಂದು ಹೇಳಬಹುದು. ಆದರೆ ಈ ಯೋಚನೆ ಬಂದಿದ್ದು ಆರ್. ವೆಂಕಟರಾಮನ್ ಅವರಿಗಂತೆ. ಈ ವಿಷಯವನ್ನು ಹಿರಿಯ ಪತ್ರಕರ್ತೆ ನೀರಜಾ ಚೌಧುರಿ ತಮ್ಮ ಹೊಸ ಪುಸ್ತಕ 'How Prime MInisters Decide' ದಲ್ಲಿ ಬರೆದಿದ್ದಾರೆ. 2002ರಲ್ಲಿ ಅಂದಿನ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರು ಈ ವಿಷಯವನ್ನು ಖುದ್ದಾಗಿ ನೀರಜಾ ಅವರಿಗೆ ಹೇಳಿದ್ದರಂತೆ. ಸಾಮಾನ್ಯವಾಗಿ ನರಸಿಂಹರಾವ್ ಅವರು ಪ್ರಮುಖ ವಿಷಯಗಳ ಬಗ್ಗೆ ವೆಂಕಟರಾಮನ್‌ರ ಸಲಹೆಗಳನ್ನು ಪಡೆಯುತ್ತಿದ್ದರು. 1980-82ರವರೆಗೆ ಇಂದಿರಾ ಗಾಂಧಿ ಪ್ರಧಾನಿಯಾಗಿದ್ದ ಅವಧಿಯಲ್ಲಿ ವೆಂಕಟರಾಮನ್ ಹಣಕಾಸು ಸಚಿವರಾಗಿದ್ದರು. ಅವರು ಹಣಕಾಸು ಇಲಾಖೆಯ ಒಳಮರ್ಮವನ್ನು ಅರಿತವರು. ಈ ಸಂದರ್ಭದಲ್ಲಿ ಯಾರನ್ನು ಹಣಕಾಸು ಸಚಿವರನ್ನಾಗಿ ಮಾಡಿದರೆ ಒಳ್ಳೆಯದು ಎಂದು ನರಸಿಂಹ ರಾಯರು ಕೇಳಿದಾಗ, ವೆಂಕಟರಾಮನ್ ಎರಡು ಹೆಸರುಗಳನ್ನು ಸೂಚಿಸಿದರು. ಮೊದಲನೆಯವರು ಐ.ಜಿ.ಪಟೇಲ್. ಅವರು ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿದ್ದವರು. ಎರಡನೆಯವರು ಡಾ.ಮನಮೋಹನ್ ಸಿಂಗ್. ಆದರೆ ಪಟೇಲ್ ಆ ಆಹ್ವಾನವನ್ನು ನಯವಾಗಿ ನಿರಾಕರಿಸಿದರು. ಡಾ.ಸಿಂಗ್ ಸಂತಸದಿಂದ ಒಪ್ಪಿಕೊಂಡರು. ಆ ಸಂದರ್ಭದಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಸರಿ ಇರಲಿಲ್ಲ. ಆರ್ಥಿಕ ಹೊರೆ, ಸಾಲ ಮಿತಿಮೀರಿತ್ತು. ಚಂದ್ರಶೇಖರ್ ಪ್ರಧಾನಿಯಾಗಿದ್ದಾಗ ವಿದೇಶಿ ಸಾಲವನ್ನು ತೀರಿಸಲು ಬಂಗಾರವನ್ನು ಅಡ ಇಡಲಾಗಿತ್ತು. ಆ ಬಂಗಾರವನ್ನು ಮರಳಿ ತರಬೇಕಾದ ಜರೂರು ಇತ್ತು. ಸೋವಿಯತ್ ಒಕ್ಕೂಟ ಪತನವಾಗಿತ್ತು. ವಿಶ್ವಬ್ಯಾಂಕ್ ಮತ್ತು ಐಎಂಎಫ್ ಭಾರತದ ವಿತ್ತ ಪರಿಸ್ಥಿತಿ ನೋಡಿ ಕಳವಳ ವ್ಯಕ್ತಪಡಿಸಿದ್ದವು. ಇವರೆಡೂ ಅಂತಾರಾಷ್ಟ್ರೀಯ ಸಂಸ್ಥೆಗಳನ್ನು ನಿಭಾಯಿಸುವವರು ದೇಶದ ಹಣಕಾಸು ಸಚಿವರಾದರೆ ಒಳ್ಳೆಯದು ಎಂದು ನರಸಿಂಹರಾಯರಿಗೆ ಬಲವಾಗಿ ಅನಿಸಿತ್ತು. ಅದೇ ವೇಳೆ, ಕಾಂಗ್ರೆಸ್ ನಾಯಕ ಕ್ಯಾಪ್ಟನ್ ಸತೀಶ್ ಶರ್ಮ ಅವರು ನರಸಿಂಹರಾಯರನ್ನು ಭೇಟಿಯಾದರು. 'ರಾಯರೇ, ಯಾರನ್ನು ಹಣಕಾಸು ಸಚಿವರನ್ನಾಗಿ ಮಾಡುತ್ತಿದ್ದೀರಿ?' ಎಂದು ಸಹಜವಾಗಿ ಕೇಳಿದರು. ಕ್ಯಾಪ್ಟನ್ ಶರ್ಮ ಹಾಗೆ ಕೇಳಿದಾಗ, ಸೋನಿಯಾ ಗಾಂಧಿಯ ವರಿಂದ ಯಾವುದಾದರೂ ಹೆಸರನ್ನು ಹೊತ್ತು ತಂದಿರಬಹುದಾ ಎಂಬ ಯೋಚನೆ ರಾಯರ ಮನಸ್ಸಿನಲ್ಲಿ ಹಾದುಹೋಯಿತು. ಆ ದಿನಗಳಲ್ಲಿ ಕ್ಯಾಪ್ಟನ್ ಶರ್ಮ ಮೂಲಕ ಸೋನಿಯಾ ಗಾಂಧಿ ಸಂದೇಶಗಳನ್ನು ಕಳಿಸುತ್ತಿದ್ದರು. ರಾಯರು ಯಾರ ಹೆಸರನ್ನೂ ಹೇಳದೇ, 'ಮುಂದಿನ ಹಣಕಾಸು ಸಚಿವರು ವಿಷಯ ಪರಿಣತರಾಗಿರುತ್ತಾರೆ' ಎಂದು ಮುಗುಮ್ಮಾಗಿ ಹೇಳಿದರು. ಹಾಗೆ ಹೇಳಿದಾಗ ಕ್ಯಾಪ್ಟನ್ ಶರ್ಮ ಏನನ್ನೂ ಹೇಳಲಿಲ್ಲ. ಸೋನಿಯಾ ಯಾವುದೇ ಹೆಸರನ್ನು ಹೇಳಿಲ್ಲ ಎಂಬುದು ರಾಯರಿಗೆ ಖಾತ್ರಿಯಾಯಿತು. ಸಂಪುಟ ರಚನೆಯಲ್ಲಿ ನೆರವಾಗುತ್ತಿದ್ದ ಪಿ.ಸಿ.ಅಲೆಗ್ಸಾಂಡರ್ ಅವರನ್ನು ಕರೆದು, ಡಾ.ಸಿಂಗ್ ಅವರನ್ನು ಭೇಟಿ ಮಾಡಿ ವಿಷಯವನ್ನು ಚರ್ಚಿಸುವಂತೆ ಸೂಚಿಸಿದರು. 1991ರ ಜೂನ್ 21ರಂದು ಬೆಳಗ್ಗೆ 5 ಗಂಟೆಗೆ ಅಲೆಗ್ಸಾಂಡರ್, ಡಾ.ಸಿಂಗ್‌ಗೆ ಫೋನ್ ಮಾಡಿ ತಮ್ಮನ್ನು ಭೇಟಿ ಮಾಡುವಂತೆ ಸೂಚಿಸಿದರು. ಅದಾದ ಬಳಿಕ ರಾಯರ ಸೂಚನೆ ಮೇರೆಗೆ ಅವರ ಭೇಟಿಗೆ ಹೋದರು. ಅಲೆಗ್ಸಾಂಡರ್ ವಿಷಯವನ್ನು ಪ್ರಸ್ತಾಪಿಸುತ್ತಿದ್ದಂತೆ, ಡಾ.ಸಿಂಗ್ ಮರು ಮಾತಾಡದೇ ಒಪ್ಪಿಕೊಂಡರು (ಚಂದ್ರಶೇಖರ್ ಅವಧಿಯಲ್ಲಿ ಯುಜಿಸಿ ಅಧ್ಯಕ್ಷರಾಗಿ ನೇಮಕವಾಗಿದ್ದ ಡಾ.ಸಿಂಗ್, ತಮ್ಮನ್ನು ಆದೇ ಹುದ್ದೆಯಲ್ಲಿ ಮುಂದುವರಿಸುವಂತೆ ಕೇಳುವವರಿದ್ದರು). ಅದೇ ದಿನ ಮಧ್ಯಾಹ್ನದ ವೇಳೆಗೆ ನರಸಿಂಹರಾಯರು ಪ್ರಧಾನಿಯಾಗಿ ಮತ್ತು ಡಾ.ಮನಮೋಹನ್ ಸಿಂಗ್ ಹಣಕಾಸು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಡಾ.ಸಿಂಗ್ ಅವರು ಆ ಸಚಿವರಾಗಿದ್ದು ಎಲ್ಲರಿಗೂ ಅಚ್ಚರಿಯನ್ನುಂಟುಮಾಡಿತ್ತು.

ಇದು ಬೆಳೆದ ಮಗಳನ್ನಿಟ್ಟುಕೊಂಡ ಎಲ್ಲ ತಾಯಂದಿರ ಸಮಸ್ಯೆ!

ಮೊದಲಾಗಿದ್ದರೆ ಮಗಳ ಮೇಲೆ ನಿಗಾ ಇಡುವುದು ಸುಲಭವಾಗಿತ್ತು. ಕಾಲೇಜಿಗೆ ಹೋಗುವ ಮಗಳು ಪ್ರೇಮಪಾಶಕ್ಕೆ ಬಿದ್ದರೆ ಪತ್ತೆಹಚ್ಚುವುದು ಕಷ್ಟವೇನೂ ಆಗುತ್ತಿರಲಿಲ್ಲ. ಎಲ್ಲ ಲವ್ವೂ ಲವ್‌ಲೆಟರ್‌ನಲ್ಲಿಯೇ ಆರಂಭವಾಗುತ್ತಿದ್ದುದರಿಂದ, ಮಗಳು ಕಾಲೇಜಿಗೆ ಹೋದಾಗಲೇ ಪೋಸ್ಟ್‌ಮನ್ ಮನೆಗೆ ತಲುಪಿಸಿಹೋಗುತ್ತಿದ್ದ. ಅಕ್ಷರಗಳ ವಾಸನೆಯಿಂದಲೇ ತಾಯಿಗೆ ಗೊತ್ತಾಗಿಬಿಡುತ್ತಿತ್ತು.

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vveditoped@gmail.com

ಕೆಲವು ದಿನಗಳ ಹಿಂದೆ ಕನ್ನಡದ ಯುವ ಕವಯಿತ್ರಿಯೊಬ್ಬಳು ನಮ್ಮ ಪತ್ರಿಕಾಲಯಕ್ಕೆ ಬಂದಿದ್ದಳು. ಸುಮಾರು ಮೂರು ವರ್ಷಗಳ ನಂತರ ಭೇಟಿಯಾಗಿದ್ದಳು. ಎಂದಿನ ಲವಲವಿಕೆ ಇರಲಿಲ್ಲ. ಮುಖದಲ್ಲಿ ನಿಸ್ತೇಜ ಭಾವ, ಚಿಂತೆಯ ಗೆರೆಗಳು. ಆಕೆ ಅಷ್ಟೊಂದು ಸಪ್ಪೆಯಾಗಿದ್ದುದನ್ನು ನೋಡಿದ್ದೇ ಇಲ್ಲ. ಚಟಾಕಿಯ ಮಾತುಗಳಿಗೂ ಚಕಾರವಿಲ್ಲ. ಏನೋ ವಿಚಿತ್ರ ಸಂಕಟ, ನೋವಿನಿಂದ ನರಳುತ್ತಿದ್ದಾಳೆಂದು ಅನಿಸಿತು. ನನ್ನ ತಮಾಷೆಯ ಮಾತುಗಳು ಸರ್ರನೆ ಗಂಟಲ ಹುತ್ತದೊಳಗೆ ಇಳಿದು ಹೋದವು.

ಎರಡು ನಿಮಿಷಗಳ ಮೌನದ ಬಳಿಕ ಆಕೆಯೇ ಹೇಳಿದಳು- ''ಮಗಳು ಪಿಯುಸಿ ಮೊದಲ ವರ್ಷದಲ್ಲಿ ಓದುತ್ತಿದ್ದಾಳೆ. ನನಗೆ ಅವಳದೇ ಚಿಂತೆ. ಅವಳಿಗೆ ಈಗ ಹದಿನಾರು. ನೋಡಲು ಇಪ್ಪತ್ತೈದರ ಹುಡುಗಿಯಂತೆ ಕಾಣುತ್ತಾಳೆ. ಸುಂದರಿಯಾದ ಹೆಣ್ಣುಮಕ್ಕಳು ಮನೆಯಲ್ಲಿದ್ದರೆ, ಬಂಗಾರಕ್ಕಿಂತ ಜೋಪಾನವಾಗಿ ಕಾಪಾಡಬೇಕು. ಬಂಗಾರ ವನ್ನಾದರೆ ಲಾಕರ್‌ನಲ್ಲಿ ಇಡಬಹುದು. ಹೆಣ್ಣುಮಕ್ಕಳನ್ನು ಹಾಗಿಡಲಾಗುತ್ತಾ? ಮನೆಯಲ್ಲೂ ಇರಿಸಿಕೊಳ್ಳಲಾಗುವುದಿಲ್ಲ. ಬೆಳಗಾದರೆ ಸಾಕು ಸ್ನೇಹಿತೆಯರ ಜತೆ ಕಾಲೇಜಿಗೆ ಹೋಗುತ್ತೇನೆ ಅಂತ ಹೊರಟವಳು ರಾತ್ರಿ ಏಳಕ್ಕೇ ಮನೆ ಸೇರೋದು. ಕಾಲೇಜಿಗೇ ಹೋಗ್ತಾರೋ, ಎಲ್ಲಿಗೆ ಹೋಗ್ತಾರೋ ಗೊತ್ತಾಗೊಲ್ಲ. ನನ್ನ ಯಜಮಾನರಿಗೆ ಮಕ್ಕಳಿಗೆ ಟೈಮ್ ಕೊಡಲು ಸಹ ಆಗದಷ್ಟು ಕೆಲಸ.

ಇತ್ತೀಚೆಗೆ ಅವಳ ವರ್ತನೆ, ಹಾವಭಾವ ಬದಲಾಗಿಬಿಟ್ಟಿದೆ. ನನಗಂತೂ ತಲೆತುಂಬಾ ಸಹಸ್ರ ಚೇಳುಗಳು ಹರಿದಂತಾಗುತ್ತದೆ. ಎಷ್ಟೋ ದಿನ ಡೈನಿಂಗ್ ಟೇಬಲ್ ಮೇಲೆ ಊಟ ಮಾಡದೇ ಹಾಗೇ ಕುಳಿತುಬಿಡುತ್ತೇನೆ. ಇತ್ತೀಚೆಗೆ ನಿದ್ದೆಯೂ ಬರುತ್ತಿಲ್ಲ. ಜೀವನದಲ್ಲಿ ಆಸಕ್ತಿಯೇ ಇಲ್ಲ. ಇತ್ತಿತ್ತಲಾಗಿ ವಿಚಿತ್ರ ದುಃಸ್ವಪ್ನ. ರಾತ್ರಿ ಕಿಟಾರನೆ ಕಿರುಚುತ್ತೇನಂತೆ. ಯಜಮಾನರು ಗಾಬರಿಬಿದ್ದು ಮನಶ್ಶಾಸ್ತ್ರಜ್ಞರ ಹತ್ತಿರ ಕರೆದುಕೊಂಡು ಹೋದರು. ಅವರು ಪರೀಕ್ಷಿಸಿ, 'ಮನೆಯಲ್ಲಿ ಬೆಳೆದ ಮಗಳಿದ್ದಾಳಾ' ಅಂತ ಕೇಳಿದರು. 'ಹೌದು' ಎಂದು ತಲೆ ಯಾಡಿಸಿದೆ. 'ಪ್ರತಿದಿನ ನಿಮ್ಮಂಥ ಮೂರ್ನಾಲ್ಕು ಹೆಂಗಸರು ಬರುತ್ತಾರೆ. ಎಲ್ಲರದೂ ಒಂದೇ ಸಮಸ್ಯೆ. ಬೆಂಗಳೂರಿನಂಥ ನಗರದಲ್ಲಿ ಮನೆಯಲ್ಲಿ ಮಗಳು ಬೆಳೆದು ದೊಡ್ಡವಳಾದರೆ ತಾಯಿ ಹುಚ್ಚಿಥರ ಆಡ್ತಾಳೆ' ಎಂದರು ಡಾಕ್ಟರು. ಹದಿನೈದು ದಿನ ಕೌನ್ಸೆಲಿಂಗ್ ಮಾಡಿದರು. ಈಗ ಸ್ವಲ್ಪ ಪರವಾಗಿಲ್ಲ. ಆದರೂ ಒಮ್ಮೊಮ್ಮೆ ಮಗಳ ಚಿಂತೆ ತಲೆಯೊಳಗೆ ಇಳಿದರೆ, ಥೇಟು ಹುಚ್ಚಿಯೇ ಆಗಿಬಿಡ್ತೇನೆ. ಏನು ಮಾಡಬೇಕೋ ಗೊತ್ತಾಗುತ್ತಿಲ್ಲ''.

ಐದು ನಿಮಿಷದಲ್ಲಿ ತನ್ನೆಲ್ಲ ಸಂಕಷ್ಟಗಳನ್ನು ಆಕೆ ನನಗೆ ವರ್ಗಾಯಿಸಿಬಿಟ್ಟಿದ್ದಳು. ಅವಳ ಸ್ಥಿತಿ ನೆನೆದು ಕೆಲಕಾಲ ಯೋಚಿಸಿದರೆ ಯಾರಾದರೂ ತುಸು ಕಲ್ಲವಿಲಗೊಳ್ಳುವುದು ಸಹಜ. ಇದು ಅವಳದ್ದೊಂದೇ ಸಂಕಟ, ಸಮಸ್ಯೆ ಅಲ್ಲ. ಮನೆಯಲ್ಲಿ ಬೆಳೆದ ಹೆಣ್ಣುಮಕ್ಕಳನ್ನು ಇಟ್ಟುಕೊಂಡ ಎಲ್ಲ ಅಪ್ಪ-ಅಮ್ಮಂದಿರ ಸಮಸ್ಯೆಯೂ ಹೌದು.

ಕೆಲವರು ಇದನ್ನು ಹೇಳಿಕೊಳ್ಳಬಹುದು, ಇನ್ನು ಕೆಲವರು ಹೇಳಿಕೊಳ್ಳಲಿಕ್ಕಿಲ್ಲ. ಹೇಳಿಕೊಳ್ಳದವರಿಗೆ ಸಮಸ್ಯೆಯೇ ಇಲ್ಲ ಅಂತ ಅರ್ಥ ಅಲ್ಲ. ಒಂದೋ ಅವರು ಮಾನಸಿಕವಾಗಿ ತಮ್ಮನ್ನು ಸಂತೈಸಿಕೊಂಡಿರುತ್ತಾರೆ, ಇಲ್ಲವೇ ಹೇಳಿಕೊಳ್ಳಲೂ ಆಗದೇ ತೊಳಲಾಡುತ್ತಿರುತ್ತಾರೆ. ಆದರೆ 'ಬೆಳೆದ ಹೆಣ್ಣು ಮಗಳು' ಒಂದಿಲ್ಲೊಂದು ರೀತಿಯಲ್ಲಿ ಅಪ್ಪ-ಅಮ್ಮಂದಿರನ್ನು ಚಿಂತೆಯ ತುದಿಗಾಲ ಮೇಲೆ ನಿಲ್ಲಿಸಿರುತ್ತಾಳೆ. ಪ್ರೀತಿಯಿಂದ ಹೊತ್ತು ಹೆತ್ತು ಬೆಳೆಸಿದ ಮಗಳು ಬೆಳೆದು ದೊಡ್ಡವಳಾಗುತ್ತಿದ್ದಂತೆ, ಸಮಸ್ಯೆಯ ಪ್ರತಿರೂಪವಾಗಿ ಕಂಗೊಳಿಸುತ್ತಾಳೆ. ಕ್ರಮೇಣ ಅವಳೇ ಶತ್ರುವಿನ ಥರಾ ಗೋಚರಿಸುತ್ತಾಳೆ. ಹೇಗಾದರೂ ಮಾಡಿ ಇವಳನ್ನು ಯಾವನಿಗಾದರೂ ಕಟ್ಟಿದರೆ ಸಾಕಪ್ಪಾ, ಅಲ್ಲಿಗೆ ಜವಾಬ್ದಾರಿ ಮುಗೀತು ಎಂಬ ಲೆಕ್ಕಾಚಾರದಲ್ಲಿ ಮುಳುಗಿರುತ್ತಾಳೆ.

ಎಲ್ಲ ಬೆಳೆದ ಹೆಣ್ಣುಮಕ್ಕಳೂ ಹೀಗೇ ಅಂತಲ್ಲ, ಎಲ್ಲ ಅಪ್ಪ-ಅಮ್ಮಂದಿರು ಸಹ ಹೀಗೇ ಅಂತಲ್ಲ. ಆದರೆ ಇದು ಬಹುತೇಕ 'ಘರ್ ಘರ್ ಕಿ ಕಹಾನಿ'ಯೇ. ತಾನು ಮಗಳ ವಯಸ್ಸಿನವಳಿದ್ದಾಗ ಹೀಗಿದ್ದೆ, ಹೀಗೇ ವರ್ತಿಸುತ್ತಿದ್ದೆ, ತನ್ನ ಮನಸ್ಸಿನಲ್ಲಿ ಹರಿದಾಡುತ್ತಿದ್ದ ಕಾಮನೆಗಳು ಹೇಗಿದ್ದವು ಎಂಬುದನ್ನು ಯಾವ ತಾಯಿಯೂ ಈಗ ಯೋಚಿಸುವುದಿಲ್ಲ. ಮಗಳ ಬೇಕು-ಬೇಡ-ಬೇಡಿಕೆಗಳ ಬಗ್ಗೆ ಸ್ವಲ್ಪವೂ ಯೋಚಿಸುವುದಿಲ್ಲ. ಮಗಳು ದೊಡ್ಡವಳಾಗುತ್ತಿದ್ದಂತೆ ಅವಳನ್ನು ನೋಡುವ, ನಡೆಸಿಕೊಳ್ಳುವ ರೀತಿ-ನೀತಿಗಳೇ ತಕ್ಷಣ ಬದಲಾಗಿಬಿಡುತ್ತದೆ. ಸಮಸ್ಯೆ ಆರಂಭವಾಗುವುದೇ ಇಲ್ಲಿ.

ಇಂಥ ಮನಸ್ಥಿತಿಯಲ್ಲಿ ಮಗಳು ಏನೇ ಮಾಡಲಿ, ಮುಟ್ಟಲಿ, ತಾಯಿಯ ತಕರಾರು. ಮುಟ್ಟಿದ್ದೆಲ್ಲವೂ ಸೊಟ್ಟಗೇ ಕಾಣುತ್ತದೆ. ಮಗಳೂ ಹಾಗೇ. ತ